ನಿಂತುಹೋಗಿತ್ತು. ಅನಂತನಾಗ್ ಅವರಿಗೆ ನಾನೇ ಕತೆ ಹೇಳಿ ಅದನ್ನು ಒಪ್ಪಿಸಿದ್ದೆ. 'ಬೆತ್ತಲೆ ಸೇವೆ ಕತ್ತಲೆಯಲ್ಲಿ' ಎಂದು ಆಗ ಪತ್ರಿಕೆಗಳಲ್ಲಿ ಬರೆದರು. ಅದನ್ನು ಓದಿದ್ದ ವರದಪ್ಪನವರು ಆ ಸಿನಿಮಾ ಬಗೆಗೆ ಕೇಳಿದರು. ಅದರ ಸಂಭಾಷಣೆಯನ್ನೂ ನಾನು ಮಿಮಿಕ್ರಿ ಶೈಲಿಯಲ್ಲಿ ಹೇಳಿದೆ. ಕೇಳುತ್ತಲೇ ನಕ್ಕರು. ಚಂದೂಲಾಲ್ ಜೈನ್ ಅವರನ್ನು ಒಪ್ಪಿಸಿ ತಾವೇ ಅದನ್ನೂ ನಿರ್ಮಾಣ ಮಾಡಬಹುದು ಎಂದರು. ಆ ನಿರ್ಮಾಪಕರಿಗೆ ಹಣ ಕೊಡಲು ಹೋದಾಗ, ಅವರು ತಮ್ಮ ಹೆಸರಿದ್ದರೆ ಅಷ್ಟೇ ಸಾಕು ಎಂದು ಕೇಳಿಕೊಂಡರು. ಟೈಟಲ್ ಕಾರ್ಡ್‌ನಲ್ಲಿ ಜಯಕುಮಾರ್ ಅವರ ಹೆಸರನ್ನೂ ಸೇರಿಸಿಕೊಂಡರು. ವರದಪ್ಪನವರ ಮನಸ್ಸು ದೊಡ್ಡದೆನ್ನುವುದಕ್ಕೆ ಇದು ಸಾಕ್ಷಿ.

'ಬೆತ್ತಲೆ ಸೇವೆ' ಬಿಡುಗಡೆಯಾಗುವ ಮೊದಲೇ 'ಪ್ರಾಯ ಪ್ರಾಯ ಪ್ರಾಯ' ತೆರೆಕಂಡಿತು. 'ಪರಾಜಿತ' ಸೆನ್ಸಾರ್ ಸಮಸ್ಯೆಯಿಂದಾಗಿ ತಡವಾಗಿ ಬಿಡುಗಡೆಯಾಯಿತು. ಹೀಗಾಗಿ ಮೊದಲು ನಾನು ಬರೆದ ಚಿತ್ರಗಳಲ್ಲಿ 'ಪ್ರಾಯ ಪ್ರಾಯ ಪ್ರಾಯ' ತೆರೆಕಂಡಂತಾಯಿತು.

◆ ಸಿದ್ದಲಿಂಗಯ್ಯನವರ ಮಗ ನಾಯಕನಾದ ಸಿನಿಮಾಗೆ ನೀವು ಬರೆದಿರಿ. ಅದು ಆದದ್ದು ಹೇಗೆ?

'ಪ್ರಜಾಮತ'ದಲ್ಲಿ 'ಪ್ರೇಮಪರ್ವ' ಕಾದಂಬರಿ ಪ್ರಕಟವಾಗುತ್ತಿತ್ತು. ಅದನ್ನು ಸಿದ್ದಲಿಂಗಯ್ಯನವರು ಪತ್ರಿಕಾ ಕಚೇರಿಗೇ ಹೋಗಿ ಓದಿ, ನನ್ನನ್ನು ಫೋನ್ ಮಾಡಿ ಕರೆಸಿಕೊಂಡರು. ತಮ್ಮ ಮಗ ಮುರಳಿ, ಭವ್ಯಾ ಅವರನ್ನು ನಾಯಕ–ನಾಯಕಿಯಾಗಿಸಿ ಚಿತ್ರೀಕರಿಸಿದರು. 'ಅದಕ್ಕೆ ಸಂಭಾಷಣೆ ಬರೆದುಕೊಡುವಿರೋ ಅಥವಾ ಉದಯಶಂಕರ್ ಕೈಲೇ ಬರೆಸಬೇಕೋ' ಎಂದು ಕಾಲೆಳೆದಿದ್ದರು. ಕೊನೆಗೆ ನಾನೇ ಬರೆದುಕೊಟ್ಟೆ. ಹೀಗೆ ಸಿನಿಮಾಯಾನ ಪ್ರಾರಂಭವಾಯಿತು.

◆ ಪುಟ್ಟಣ್ಣ ಕಣಗಾಲ್ ನಿಮ್ಮ ಸಂಪರ್ಕಕ್ಕೆ ಬಂದದ್ದು ಹೇಗೆ?

ತಮಿಳುನಾಡಿನಲ್ಲಿ ಎಲ್ಲೋ 'ಪ್ರೇಮಪರ್ವ' ಪ್ರಿಮಿಯರ್ ಶೋ ಆಗಿತ್ತು. ಅದನ್ನು ಪುಟ್ಟಣ್ಣ ನೋಡಿದ್ದರು. ನಾನು ಆರೋಗ್ಯ ಇಲಾಖೆಯಲ್ಲಿ ಕೆಲಸಗಾರ. ನಮ್ಮ ಸಾಹೇಬರ ಹತ್ತಿರ ಫೋನ್ ಇರೋದು. ಅಲ್ಲಿಗೆ ಒಮ್ಮೆ ಪುಟ್ಟಣ್ಣ ಫೋನ್ ಮಾಡಿದರು. ಫೋನ್ ಎತ್ತಿದ ಸಾಹೇಬರು, 'ಯಾರೋ ಪುಟ್ಟಣ್ಣ ಅಂತೆ ನೋಡಪ್ಪ' ಅಂತ ಕೊಟ್ಟರು. 'ನಾನು ಪುಟ್ಟಣ್ಣ ಮದ್ರಾಸ್‌ನಿಂದ ಮಾತಾಡ್ತಾ ಇರೋದು' ಅಂದರು. 'ನಾನು ಯಾವ ಪುಟ್ಟಣ್ಣ' ಎಂದೆ. 'ಕನ್ನಡಿಗರೋ ನೀವು? ಸಿನಿಮಾ ಗಿನಿಮಾ ನೋಡಲ್ವಾ? ನಾನು ಪುಟ್ಟಣ್ಣ ಕಣಗಾಲ್ ಅಂತ' ಅಂದರು. ತಕ್ಷಣ ನಾನು ಬೆಚ್ಚಿ, 'ನಮಸ್ಕಾರ ಸರ್' ಎಂದೆ. 'ಮರಿ... ನಿಮ್ಮ ಸಿನಿಮಾ ನೋಡಿದೆ, ಪ್ರೇಮಪರ್ವ. ಬಹಳ ಚೆನ್ನಾಗಿ ಬರೆದಿದೀರಿ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ನಾನು ಏನು ಹೇಳಬೇಕೋ ತೋಚದೆ ಸುಮ್ಮನೆ ರಿಸೀವರ್ ಹಿಡಿದುಕೊಂಡಿದ್ದೆ. ಫೋನ್ ಕಟ್ ಆಯಿತು.

ಕಚೇರಿಯ ಸ್ನೇಹಿತರಿಗೆ ಪುಟ್ಟಣ್ಣ ಕಣಗಾಲ್ ಅವರಿಂದ ಫೋನ್ ಬಂದಿದ್ದ ವಿಷಯ ಹೇಳಿದರೆ, ನಂಬಲೇ ಇಲ್ಲ. 'ಯಾರೋ ತಮಾಷೆಗೆ ಮಾಡಿರಬೇಕು. ಪುಟ್ಟಣ್ಣನವರಿಂದ ನಿನಗೆ ಫೋನಾ' ಎಂದು ಛೇಡಿಸಿದರು. ನಾನೂ ಸುಮ್ಮನಾಗಿಬಿಟ್ಟೆ.

ಒಂದು ವರ್ಷದ ನಂತರ ರಾಜನ್ ಎಂಬ ನಿರ್ಮಾಪಕರೊಬ್ಬರನ್ನು ಪುಟ್ಟಣ್ಣ ಚಿತ್ರದುರ್ಗಕ್ಕೆ ಕಳುಹಿಸಿದರು. ಅವರು ಹೊಸ ಸಿನಿಮಾ ಮಾಡುತ್ತಿದ್ದಾರೆಂದೂ, ಅದರ ಬಗೆಗೆ ಮಾತನಾಡಲು ನನ್ನನ್ನು ಕರೆದಿದ್ದಾರೆಂದೂ ತಿಳಿಸಿದರು. ನಾನು ಯಾವುದೇ ಕಾರಣಕ್ಕೂ ಕೆಲಸಕ್ಕೆ ಮೋಸ ಮಾಡುತ್ತಿರಲಿಲ್ಲ. ರಜಾ ಇದ್ದಾಗಷ್ಟೇ ಹೋಗುತ್ತಿದ್ದುದು. ತಕ್ಷಣ ಹೊರಡುವ ಸ್ಥಿತಿಯಲ್ಲಿ ಇರಲಿಲ್ಲ. ಮರುದಿನ ರಜಾ ಹಾಕಿ ಬರುವುದಾಗಿ ತಿಳಿಸಿದೆ. 'ನಿಮ್ಮನ್ನು ಜತೆಗೆ ಕರೆದುಕೊಂಡು ಬರಬೇಕು